

ಏರುಮುಖಿಯಾಗಿರುವ ಚಿನ್ನದ ಬೆಲೆಯ ಕಾರಣ ಆಭರಣ ಕೊಳ್ಳಲು ಅಸಾಧ್ಯವಾಗಿರುವಾಗ ಮಹಿಳೆಯರು ಪರ್ಯಾಯ ಲೋಹಗಳತ್ತ ಚಿತ್ತ ಹರಿಸಿದ್ದಾರೆ. ವಿನ್ಯಾಸದಲ್ಲಿ ಬಹುಆಯ್ಕೆಗಳಿರುವ ಇತರೆ ಲೋಹಗಳ ಒಡವೆಗಳು ಮಹಿಳೆಯರ ಮೆಚ್ಚು ಕೂಡ ಆಗಿವೆ.



# ಪರ್ಯಾಯ ಲೋಹ; ಹೆಂಗಳೆಯರ ಮೋಹ



■ ಉಮಾ

ಹೆಣ್ಣು ಮಗು ಸಂಸಾರದ ಕಣ್ಣು. ಕಡು ಬಣ್ಣದ ಜರಿ ಲಂಗ ತೊಟ್ಟ ಪೋರಿ ಪುಟ್ಟ ಓಲೆ, ಸಣ್ಣ ಸರ, ಕೈಗಳಲ್ಲಿ ಬಳೆ ತೊಟ್ಟು ಮನೆತುಂಬ ಓಡಾಡಿದರೆ ನೋಡಲು ಎರಡು ಕಣ್ಣುಗಳೇ ಸಾಲದು. ಮಗಳ ಹೊಳೆವ ಕಣ್ಣುಗಳನ್ನೇ ದಿಟ್ಟಿಸಿ ಎರಡೂ ಕೈಗಳಿಂದ ಮಗಳನ್ನು ಹಿಡಿದು ತಬ್ಬಿ ನೀವಾಳಿಸಿದರೇ ತಾಯಿಗೆ ಸಮಾಧಾನ. ಅಷ್ಟು ಚಂದದ ನೋಟ ನೀಡುತ್ತದೆ ಬಗೆ ಬಗೆಯ ಒಡವೆಗಳು.

ಹೆಣ್ಣಿನ ವಿಚಾರಕ್ಕ ಬಂದರೆ ಯಾವುದಾದರೊಂದು ಸಣ್ಣ ಆಭರಣವಾದರೂ ತೊಡದೆ ಯಾವ ಹೆಣ್ಣೂ ಮನೆಯಿಂದ ಆಚೆ ಬರಲಾರಳು. ಅಷ್ಟೊಂದು ನಂಟು, ಬೆಸುಗೆ ಹೆಣ್ಣಿಗೆ ಒಡವೆಗಳೊಂದಿಗೆ. ಈಗಂತೂ ಚಿನ್ನ, ವಜ್ರದ ಒಡವೆಗಳನ್ನು ಖರೀದಿಸಲು ಆಗದಷ್ಟು ಬೆಲೆಯೇರಿಕೆಯ ಬಿಸಿ ತಟ್ಟಿದೆ. ಹೀಗಾಗಿ